ಮೈಸೂರ ಗೆಜೆಟ್

ಸರ್ಕಾರದಿಂದ ಫಾಯಿಷ್ ಆದ್ದು.

ಬೆಂಗಳೂರು, ಶನಿವಾರ, ಜೂನ್ ತಾ॥ 7, ಸ್ರ್ 1884.

ಗಮನಿ. ಈ ಭಾಗವನ್ನು ಪ್ರತ್ಯೇಕವಾಗಿ ಸೇರಿಸಿ ಇಡುವ ಬಗ್ಗೆ ಇದಕ್ಕೆ ಬೇರೆಯಾಗಿ ಪುಟ ಸಂಖ್ಯೆ ಕೊಡಲ್ಪಡುತ್ತೆ.

೨ನೇ ಭಾಗ.

ಇಂಡ್ಯಗವರ್ನಮೆಂಟ್, ರೆಸಿಡೆಂಟರು, ಚೀಫ್ ಜಡ್ಜ್ರೀರುವಗೈರೇರಿಂದ ಕೊಡೋಣಾದ ಇಸ್ತಿಹಾರ್‌ನಾಮೆಗಳು.

ರೆಸಿಡೆಂಟರ ಇಲಾಖಾ.

ಇಸ್ತಿಹಾರ್ ನಾಮೆ.

ಫಿನ್ಯಾನ್ಷಿಯಲ್ ಇಲಾಖಾ.

1882ನೇ ಮೈಸೂರು ರೆಯಿಲ್‌ವೇ ಲೋನ್.

ತಾರೀಖು 6ನೇ ಜುಲೈ 1883.

ಲಂಡ್ಯನಲ್ಲಿ ಬಡ್ಡೀ ಸಲ್ಲತಕ್ಕ ಬಗ್ಗೆ, ಪರಾ ಬರೆಯಲ್ಪಡಬಹುದಾದಂತಾ ಸದರೀ ಸಾಲದ ಡಿಬೆಂಚರ್‌ಗಳ ಮೇಲೆ ಲಂಡ್ಯನಲ್ಲಿ, ಸ್ಟ್ಯಾಂಡ್ ಬೀದಿ 59ನೇ ನಂಬರ್ ಕಟ್ಟಣದಲ್ಲಿರುವ ಬ್ಯಾಂಕರ್‌ಗಳಾದ ಮೆಸ್ಸರ್ಸ್ ಕೌಟ್ಸ್ ಅಂಡ್ ಕೋಯವರು ಬಡ್ಡೀಯನ್ನು ಪಾವತೀ ಮಾಡುವ ಬಗ್ಗೆ ಅವರುಗಳೊಡನೆ ಮೈಸೂರು ಗವರ್ನಮೆಂಟಿನವರು ಯೇರ್ಪಾಡು ಮಾಡಿಕೊಂಡಿರುವದರಿಂದ ಲಂಡ್ಯನಲ್ಲಿ ತಮ್ಮ ಡಿಬೆಂಚರ್‌ಗಳಿಗೆ ಬಡ್ಡೀಯನ್ನು ತೆಗದುಕೊಳ್ಳಲಿಕ್ಕೆ ಯಿಷ್ಟವುಳ್ಳ ಜನಗಳು ತಮ್ಮ ಡಿಬೆಂಚರ್‌ಗಳನ್ನು ಎಕ್ಷೇಸ್‌ಮೆಂಟ್ ಯಾನೇ ಪರಾ ಬಗ್ಗೆ ಇದರಡಿ ರುಜು ಮಾಡಿರುವರ ಆಫೀಸಿಗೆ ಕಳುಹಿಸತಕ್ಕದ್ದು.

ಬಡ್ಡೀಯು, ಮದ್ರಾಸ್‌ನಲ್ಲಿ ಮದರಾಸ್ ಬ್ಯಾಂಕಿನ ಮೇಲೆ, ಡ್ಯೂಪ್ಲಿಕೇಟಾದ ಡಿಮಾಂಡ್ ಡ್ರಾಫ್ಟ್‌ಸ್ ಯೆಂಬ ಚೆಕ್ಕುಗಳ ಮೂಲಕ ರೂಪಾಯಿಗಳಾಗಿ ಕೊಡಲ್ಪಡುವದು.

ಎಕ್ಷೇಸ್‌ಮೆಂಟ್ ಬಗ್ಗೆ ಫೀ ಯೇನೂ ಚಾರ್ಜ್ ಮಾಡಲ್ಪಡಲಾರದು.

ಹೆಚ್. ಹಡ್ಸರ್ಸ್,
ಕಾಂಪ್ಟ್ರೋಲರ್.